
ಇದು ಸಂಪತ್ ಅವರ ಮೊದಲ ಕೃತಿ. ಮೊದ ಮೊದಲ ಹೆಜ್ಜೆಯಲ್ಲಿಯೇ ಮುನ್ನುಡಿ, ಬೆನ್ನುಡಿಗಳ ಕಿರುಬೆರಳು ತೋರುಬೆರಳುಗಳನ್ನು ಬಿಟ್ಟು ಸ್ವತಂತ್ರವಾಗಿ ಓದುಗನೆದುರು ಬಂದಿರುವ ಈ ಕೃತಿ, ತನ್ನ ಸತ್ವಯುತ ಕಥೆಗಳ ಕಾರಣದಿಂದಲೇ ಗಮನಸೆಳೆಯುವಷ್ಟು ಶಕ್ತವೂ ಆಗಿದೆ. ಇದರಲ್ಲಿನ ಎಲ್ಲ ಹನ್ನೆರಡು ಕಥೆಗಳೂ ಅತ್ಯುತ್ತಮ ಎಂದು ನನ್ನ ಮಾತಿನ ಅರ್ಥವಲ್ಲ. ಬರವಣಿಗೆಯ ಆರಂಭಿಕ ಹಂತದ ಮೋಹ–ಮಿತಿಗಳು ಇಲ್ಲೂ ಇವೆ. ಆದರೆ, ಅವುಗಳ ಜೊತೆಗೇ ಇಲ್ಲಿನ ಹಲವು ಕಥೆಗಳು ಶಿಲ್ಪದ ಕುರಿತ ಎಚ್ಚರದ ಕಾರಣಕ್ಕೆ, ವಸ್ತುವನ್ನು ನಿರ್ವಹಿಸಿದ ಸೂಕ್ಷ್ಮತೆಯ ಕಾರಣಕ್ಕೆ, ಕಥೆ ದಾಟಲು ಯತ್ನಿಸುತ್ತಿರುವ ಅನುಭವಜಗತ್ತಿನ ಕಾರಣಕ್ಕೆ, ಕಥನದಿಂದ ಬೇರ್ಪಡಿಸಲಾಗದಂಥ ಭಾಷೆಯ ಕಾರಣಕ್ಕೆ ಗಮನಾರ್ಹವಾಗಿವೆ.

''ಲೆಟ್ಸ್ ಬ್ರೇಕಪ್' ಎನ್ನುವ ಶೀರ್ಷಿಕೆಯನ್ನು ನೋಡಿ ಪುಸ್ತಕವನ್ನು ತೆರೆಯುವಾಗ, 'ಹೆಚ್ಚಿನ ಕಥೆಗಳು ಪ್ರೀತಿಗೆ ಸಂಬಂಧಪಟ್ಟವೇ ಆಗಿರಬಹುದೇನೋ' ಎಂದುಕೊಂಡರೆ ಅದು ಸುಳ್ಳಾಗುತ್ತದೆ" ಎಂದೇ ಸಂಪತ್, ಲೇಖಕರ ಮಾತನ್ನು ಪ್ರಾರಂಭಿಸುತ್ತಾರೆ. ಆದರೆ, ನೇರವಾಗಿಯಲ್ಲದಿದ್ದರೂ, ಇಲ್ಲಿನ ಬಹುತೇಕ ಕಥೆಗಳು ಪ್ರೀತಿಗೆ ಸಂಬಂಧಪಟ್ಟವೇ ಆಗಿವೆ. ಅದು ಹರೆಯದ ಗಂಡು–ಹೆಣ್ಣಿನ ಪ್ರೇಮವೇ ಅಲ್ಲದಿರಬಹುದು. ಪ್ರೀತಿಯ ಕೊರತೆಯಿಂದ ಅಥವಾ ಅದೇ ಪ್ರೀತಿಯ ಭಾರದಿಂದ ಕಡಿದುಹೋಗುವ, ಮತ್ತೆ ಹೇಗೋ ಕೂಡಿಕೊಳ್ಳುವ ಮನುಷ್ಯ ಸಂಬಂಧಗಳ ತಂತುಗಳ ಮಾಯಾಜಾಲವೇ ಸಂಪತ್ ಅವರ ಕಥನಪ್ರಪಂಚದ ಕೇಂದ್ರಶೋಧವಾಗಿದೆ.

ಮೇಲ್ನೋಟಕ್ಕೆ ಪ್ರೀತಿಗೆ ಸಂಬಂಧಿಸಿದ್ದು ಅನಿಸುವ 'ಲೆಟ್ಸ್ ಬ್ರೇಕಪ್' ಎನ್ನುವ ಕಥೆಯೇ, ಬರೀ ಪ್ರೀತಿಯ ಕುರಿತು ಹೇಳಿ ಮುಗಿಯುವುದಿಲ್ಲ. ಈ ಸಂಕಲನದ ಹೆಚ್ಚು ಯಶಸ್ವಿ ಕಥೆಗಳಲ್ಲೊಂದಾಗಿರುವ ಇದು, ಮನುಷ್ಯ ಸಂಬಂಧಗಳ ತಳಹದಿಯಾದ ನಂಬಿಕೆಯ ಜೊತೆಜೊತೆಯಲ್ಲಿಯೇ ಸೇರಿಹೋಗಿರುವ ಅಭದ್ರತೆಯನ್ನು ಕುರಿತು ಪರೋಕ್ಷವಾಗಿ ಮಾತಾಡುತ್ತದೆ.

ಈ ಇಡೀ ಕಥೆ, ತನ್ನ ಪ್ರೇಮಸಂಬಂಧದಿಂದ ಕಳಚಿಕೊಳ್ಳುತ್ತಿರುವ ಗೆಳತಿಯನ್ನು ಎದುರಿಸಲು ತನ್ನನ್ನು ತಾನು ಸಿದ್ಧಪಡಿಸಿಕೊಳ್ಳುತ್ತಿರುವ ನಾಯಕನ ಕಣ್ನೋಟದಿಂದ ನಿರೂಪಿತಗೊಂಡಿದೆ. 'ದಿವ್ಯಾ ಯಾಕೆ ಆಫೀಸಿಗೆ ಬಂದಿಲ್ಲ' ಎಂದು ಅರಸುತ್ತಿರುವ ಪ್ರಶಾಂತನಿಗೆ ದಿವ್ಯಾಳ ಕರೆ ಬರುತ್ತದೆ. 'ನಿನ್ ಹತ್ರ ಮಾತಾಡ್ಬೇಕು, ಸಂಜೆ ಆಫೀಸು ಮುಗಿದ ಮೇಲೆ ಸಿಗೋಣ. ಮಾಮೂಲಿ ಜಾಗ' ಎಂದಷ್ಟೇ ಹೇಳಿ ಅವಳು ಕರೆ ತುಂಡರಿಸುತ್ತಾಳೆ. 'ನಿನ್ ಹತ್ರ ಸ್ವಲ್ಪ ಮಾತಾಡ್ಬೇಕು' ಎಂಬ ಮಾತು ಹುಟ್ಟಿಸಬಹುದಾದ ಎಲ್ಲ ತಲ್ಲಣಗಳನ್ನೂ ಪ್ರಶಾಂತ್




**ಹೆಸರು: ಲೆಟ್ಸ್ ಬ್ರೇಕಪ್!**
ಲೇ: ಸಂಪತ್ ಸಿರಿಮನೆ
ಪು: 124; ಬೆ: 120
ಪ್ರಕಾಶನ: ಕಾನ್‌ಕ್ಲೇವ್ ಮೀಡಿಯಾ ಆಂಡ್ ಪಬ್ಲಿಷರ್
ಫೋನ್: 9902590303